ಕರ್ನಾಟಕ ವಿಧಾನ ಸಭೆ

ಗುರುವಾರ 29 ನೇ ಡಿಸೆಂಬರ್ 94 ರಂದು ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 11-15 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು: ಶ್ರೀ ರಮೇಶ್ ಕುಮಾರ್ ಅವರು ಪೀಠವನ್ನು ಅಲಂಕರಿಸಿದ್ದರು.

I. ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯ ಮಂತ್ರಿ) ಮಾನ್ಯ ಅಧ್ಯಕ್ಷರೆ,

1978ನೇ ಇಸವಿಯ ಕರ್ನಾಟಕ ರಾಜ್ಯ ನಾಗರೀಕ ಸೇವಾ ಅಧಿನಿಯಮದ 8(3)ನೇ ಕಲಮಿನ ಮೇರೆಗೆ;

1. ಕರ್ನಾಟಕ ರಾಜ್ಯ ಕೃಷಿ ಇಲಾಖೆಯ ಶೀಘ್ರಲಿಪಿಗಾರರಿಗೆ ಪದೋನ್ನತಿ ನೀಡಲು ಕೃಷಿ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳು 1976ಕ್ಕೆ ತಿದ್ದುಪಡಿ ಮಾಡುವ ಸಂಬಂಧದಲ್ಲಿ ದಿನಾಂಕ 31.8.1994 ರಂದು ಹೊರಡಿಸಲಾದ ಸಿಆಸುಇ 1 ಸೇನಿಇ 93ನೇ ಕ್ರಮಾಂಕದ ಅಧಿಸೂಚನೆ;

2. ಕರ್ನಾಟಕ ಲೋಕೋಪಯೋಗಿ ಇಂಜಿನಿಯರಿಂಗ್ ಇಲಾಖಾ ಸೇವೆಗಳು (ನೇಮಕಾತಿ) ನಿಯಮಗಳು 1988ಕ್ಕೆ ತಿದ್ದುಪಡಿ ಮಾಡುವ ಸಂಬಂಧದಲ್ಲಿ ದಿನಾಂಕ 19.10.1994 ರಂದು ಹೊರಡಿಸಲಾದ ಸಿಆಸುಇ 2 ಸೇನಿಡಿ 94ನೇ ಕ್ರಮಾಂಕದ ಅಧಿಸೂಚನೆ;

3. ಕರ್ನಾಟಕ ಲೋಕೋಪಯೋಗಿ (ನೀರಾವರಿ ಸೇವೆಗಳು) (ನೇಮಕಾತಿ) ನಿಯಮಗಳು 1988ಕ್ಕೆ ತಿದ್ದುಪಡಿ ಮಾಡುವ ಸಂಬಂಧದಲ್ಲಿ ದಿನಾಂಕ 19.10.1994 ರಂದು ಹೊರಡಿಸಲಾದ ಸಿಆಸುಇ 5 ಎಸ್ಆರ್ಡಿ 94ನೇ ಕ್ರಮಾಂಕದ ಅಧಿಸೂಚನೆ;

1976ರ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧಿನಿಯಮದ 47(5)ನೇ ಕಲಮಿನ ಮೇರೆಗೆ;

4. 1988-89ನೇ ಸಾಲಿನ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಪ್ರಮಾಣೀಕೃತ ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನಾ ವರದಿಗಳನ್ನು ಮಂಡಿಸುತ್ತೇನೆ.

II. ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯ ಮಂತ್ರಿ) ಮಾನ್ಯ ಅಧ್ಯಕ್ಷರೆ,

1956ರ ಕಂಪನಿಗಳ ಕಾಯ್ದೆಯ 619ಎ ಕಲಮಿನ ಮೇರೆಗೆ;

1988-89ನೇ ಸಾಲಿನ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತದ 19ನೇ ವಾರ್ಷಿಕ ವರದಿಯನ್ನು ಮಂಡಿಸುತ್ತೇನೆ.

III. ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಮಂತ್ರಿ) ಮಾನ್ಯ ಅಧ್ಯಕ್ಷರೆ,

1964ನೇ ಸಾಲಿನ ಕರ್ನಾಟಕ ಭೂ ಕಂದಾಯ ನಿಯಮದ ಪ್ರಕರಣ 194 (2)ನೇ ಕಲಮಿನ ಮೇರೆಗೆ;

1. ಧಾರಾವಾಡ ಜಿಲ್ಲೆಯ ಶಿರಹಟ್ಟಿ ತಾಲ್ಲೂಕಿನ 8 ಗ್ರಾಮಗಳ 1990-91ನೇ ಸಾಲಿನ ಭೂ ಕಂದಾಯ 22,834.17ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 26.9.1994 ರಂದು ಹೊರಡಿಸಲಾದ ಆರ್ಡಿ 294 ಟಿಆರ್ಎಂ 94ನೇ ಕ್ರಮಾಂಕದ ಅಧಿಸೂಚನೆ;

2. ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನ 15 ಗ್ರಾಮಗಳ 1974-75ನೇ ಸಾಲಿನ ಭೂ ಕಂದಾಯ 13,849.43ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 26.9.1994 ರಂದು ಹೊರಡಿಸಲಾದ ಆರ್ಡಿ 296 ಟಿಆರ್ಎಂ 94ನೇ ಕ್ರಮಾಂಕದ ಅಧಿಸೂಚನೆ;

3. ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನ 17 ಗ್ರಾಮಗಳ 1987–88ನೇ ಸಾಲಿನ ಭೂ ಕಂದಾಯ 31,157.19ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 26.9.1994 ರಂದು ಹೊರಡಿಸಲಾದ ಆರ್‌ಡಿ 289 ಟಿಆರ್‌ಎಂ 94ನೇ ಕ್ರಮಾಂಕದ ಅಧಿಸೂಚನೆ;

4. ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನ 18 ಗ್ರಾಮಗಳ 1988–89ನೇ ಸಾಲಿನ ಭೂ ಕಂದಾಯ 29,545.54ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 27.9.1994 ರಂದು ಹೊರಡಿಸಲಾದ ಆರ್‌ಡಿ 286 ಟಿಆರ್‌ಎಂ 94ನೇ ಕ್ರಮಾಂಕದ ಅಧಿಸೂಚನೆ;

5. ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನ 12 ಗ್ರಾಮಗಳ 1988–89ನೇ ಸಾಲಿನ ಭೂ ಕಂದಾಯ 10,600.00ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 28.9.1994 ರಂದು ಹೊರಡಿಸಲಾದ ಆರ್‌ಡಿ 288 ಟಿಆರ್‌ಎಂ 94ನೇ ಕ್ರಮಾಂಕದ ಅಧಿಸೂಚನೆ;

6. ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನ 12 ಗ್ರಾಮಗಳ 1985–86ನೇ ಸಾಲಿನ ಭೂ ಕಂದಾಯ 12,207.75ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 28.9.1994 ರಂದು ಹೊರಡಿಸಲಾದ ಆರ್‌ಡಿ 287 ಟಿಆರ್‌ಎಂ 94ನೇ ಕ್ರಮಾಂಕದ ಅಧಿಸೂಚನೆ;

7. ವಿಜಾಪುರ ಜಿಲ್ಲೆಯ ಬಾಗಲಕೋಟೆ ತಾಲ್ಲೂಕಿನ 36 ಗ್ರಾಮಗಳ 1992–93ನೇ ಸಾಲಿನ ಭೂ ಕಂದಾಯ 59,930.46ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 29.9.1994 ರಂದು ಹೊರಡಿಸಲಾದ ಆರ್‌ಡಿ 284 ಟಿಆರ್‌ಎಂ 94ನೇ ಕ್ರಮಾಂಕದ ಅಧಿಸೂಚನೆ;

8. ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನ 12 ಗ್ರಾಮಗಳ 1988–89ನೇ ಸಾಲಿನ ಭೂ ಕಂದಾಯ 11,000.38ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 1.10.1994 ರಂದು ಹೊರಡಿಸಲಾದ ಆರ್‌ಡಿ 295 ಟಿಆರ್‌ಎಂ 94ನೇ ಕ್ರಮಾಂಕದ ಅಧಿಸೂಚನೆ;

9. ವಿಜಾಪುರ ಜಿಲ್ಲೆಯ ವಿಜಾಪುರ ತಾಲ್ಲೂಕಿನ 56 ಗ್ರಾಮಗಳ 1990–91ನೇ ಸಾಲಿನ ಭೂ ಕಂದಾಯ 65,101.78ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 1.10.1994 ರಂದು ಹೊರಡಿಸಲಾದ ಆರ್‌ಡಿ 285 ಟಿಆರ್‌ಎಂ 94ನೇ ಕ್ರಮಾಂಕದ ಅಧಿಸೂಚನೆ;

10. ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನ 53 ಗ್ರಾಮಗಳ 1972–73ನೇ ಸಾಲಿನ ಭೂ ಕಂದಾಯ 2,29,336.71 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 6.10.1994 ರಂದು ಹೊರಡಿಸಲಾದ ಆರ್‌ಡಿ 306 ಟಿಆರ್‌ಎಂ 94ನೇ ಕ್ರಮಾಂಕದ ಅಧಿಸೂಚನೆ;

11. ವಿಜಾಪುರ ಜಿಲ್ಲೆಯ ಬಾಗಲಕೋಟೆ ತಾಲ್ಲೂಕಿನ 36 ಗ್ರಾಮಗಳ 1993–94ನೇ ಸಾಲಿನ ಭೂ ಕಂದಾಯ 29,150.43ರಂದು ಹೊರಡಿಸಲಾದ ಆರ್‌ಡಿ 291 ಟಿಆರ್‌ಎಂ 94ನೇ ಕ್ರಮಾಂಕದ ಅಧಿಸೂಚನೆ;

12. ಬೆಳಗಾವಿ ಜಿಲ್ಲೆಯ ರಾಯಭಾಗ್ ತಾಲ್ಲೂಕಿನ 13 ಗ್ರಾಮಗಳ 1985–86ನೇ ಸಾಲಿನ ಭೂ ಕಂದಾಯ 23,724.89 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 20.10.1994 ರಂದು ಹೊರಡಿಸಲಾದ ಆರ್‌ಡಿ 309 ಟಿಆರ್‌ಎಂ 94ನೇ ಕ್ರಮಾಂಕದ ಅಧಿಸೂಚನೆ;

13. ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನ 39 ಗ್ರಾಮಗಳ 1987–88ನೇ ಸಾಲಿನ ಭೂ

ಕಂದಾಯ 1,64,755.57 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 6.10.1994 ರಂದು ಹೊರಡಿಸಲಾದ ಆರ್‌ಡಿ 292 ಟಿಆರ್‌ಎಂ 94ನೇ ಕ್ರಮಾಂಕದ ಅಧಿಸೂಚನೆ;

14. ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನ 14 ಗ್ರಾಮಗಳ 1992–93ನೇ ಸಾಲಿನ ಭೂ ಕಂದಾಯ 11,622.76 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 22.10.1994 ರಂದು ಹೊರಡಿಸಲಾದ ಆರ್‌ಡಿ 308 ಟಿಆರ್‌ಎಂ 94ನೇ ಕ್ರಮಾಂಕದ ಅಧಿಸೂಚನೆ;

15. ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನ 16 ಗ್ರಾಮಗಳ 1971–72ನೇ ಸಾಲಿನ ಭೂ ಕಂದಾಯ 30,058.41 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 24.10.1994 ರಂದು ಹೊರಡಿಸಲಾದ ಆರ್‌ಡಿ 311 ಟಿಆರ್‌ಎಂ 94ನೇ ಕ್ರಮಾಂಕದ ಅಧಿಸೂಚನೆ;

16. ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನ 19 ಗ್ರಾಮಗಳ 1984–85ನೇ ಸಾಲಿನ ಭೂ ಕಂದಾಯ 22,490. 12 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 24.10.1994 ರಂದು ಹೊರಡಿಸಲಾದ ಆರ್‌ಡಿ 310 ಟಿಆರ್‌ಎಂ 94ನೇ ಕ್ರಮಾಂಕದ ಅಧಿಸೂಚನೆ;

17. ವಿಜಾಪುರ ಜಿಲ್ಲೆಯ ಬಾದಾಮಿ ತಾಲ್ಲೂಕಿನ 65 ಗ್ರಾಮಗಳ 1990–91ನೇ ಸಾಲಿನ ಭೂ ಕಂದಾಯ 67,926.61 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 25.10.1994 ರಂದು ಹೊರಡಿಸಲಾದ ಆರ್‌ಡಿ 293 ಟಿಆರ್‌ಎಂ 94ನೇ ಕ್ರಮಾಂಕದ ಅಧಿಸೂಚನೆ;

18. ಬೆಳಗಾವಿ ಜಿಲ್ಲೆಯ ರಾಯಭಾಗ ತಾಲ್ಲೂಕಿನ 8 ಗ್ರಾಮಗಳ 1976–77ನೇ ಸಾಲಿನ ಭೂ ಕಂದಾಯ 24,738.73ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 5.12.1994 ರಂದು ಹೊರಡಿಸಲಾದ ಆರ್‌ಡಿ 179 ಟಿಆರ್‌ಎಂ 94ನೇ ಕ್ರಮಾಂಕದ ಅಧಿಸೂಚನೆ;

19. ಬೆಳಗಾವಿ ರಾಯಭಾಗ್ ತಾಲ್ಲೂಕಿನ 10 ಗ್ರಾಮಗಳ 1974–75ನೇ ಸಾಲಿನ ಭೂ ಕಂದಾಯ 27,335.13 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 6.12.1994 ರಂದು ಹೊರಡಿಸಲಾದ ಆರ್‌ಡಿ 183 ಟಿಆರ್‌ಎಂ 94ನೇ ಕ್ರಮಾಂಕದ ಅಧಿಸೂಚನೆ;

20. ಬೆಳಗಾವಿ ಜಿಲ್ಲೆಯ ರಾಜಭಾಗ್ ತಾಲ್ಲೂಕಿನ 15 ಗ್ರಾಮಗಳ 1975–76ನೇ ಸಾಲಿನ ಭೂ ಕಂದಾಯ 35,419.60ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 6.12.1994 ರಂದು ಹೊರಡಿಸಲಾದ ಆರ್‌ಡಿ 182 ಟಿಆರ್‌ಎಂ 94ನೇ ಕ್ರಮಾಂಕದ ಅಧಿಸೂಚನೆ;

21. ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ 8ಗ್ರಾಮಗಳ 1986–87ನೇ ಸಾಲಿನ ಭೂ ಕಂದಾಯ 11,322.06 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 6.12.1994 ರಂದು ಹೊರಡಿಸಲಾದ ಆರ್‌ಡಿ 195 ಟಿಆರ್‌ಎಂ 94ನೇ ಕ್ರಮಾಂಕದ ಅಧಿಸೂಚನೆ;

22. ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ 9ಗ್ರಾಮಗಳ 1987–88ನೇ ಸಾಲಿನ ಭೂ ಕಂದಾಯ 11,563.87 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 7.12.1994 ರಂದು ಹೊರಡಿಸಲಾದ ಆರ್‌ಡಿ 164 ಟಿಆರ್‌ಎಂ 94ನೇ ಕ್ರಮಾಂಕದ ಅಧಿಸೂಚನೆ;

23. ಬೆಳಗಾವಿ ಜಿಲ್ಲೆಯ ಗೋಕಾಕ್ ತಾಲ್ಲೂಕಿನ 6 ಗ್ರಾಮಗಳ 1988–89ನೇ ಸಾಲಿನ ಭೂ ಕಂದಾಯ 11,009.38ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 6.12.1994 ರಂದು ಹೊರಡಿಸಲಾದ ಆರ್‌ಡಿ 187 ಟಿಆರ್‌ಎಂ 94ನೇ ಕ್ರಮಾಂಕದ ಅಧಿಸೂಚನೆ;

24. ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನ 16 ಗ್ರಾಮಗಳ 1971–72ನೇ ಸಾಲಿನ ಭೂ ಕಂದಾಯ 14,154.00ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 6.12.1994 ರಂದು ಹೊರಡಿಸಲಾದ ಆರ್‌ಡಿ 188 ಟಿಆರ್‌ಎಂ 94ನೇ ಕ್ರಮಾಂಕದ ಅಧಿಸೂಚನೆ;

25. ಬೆಳಗಾವಿ ಜಿಲ್ಲೆಯ ರಾಯಭಾಗ್ ತಾಲ್ಲೂಕಿನ 12 ಗ್ರಾಮಗಳ 1973–74ನೇ ಸಾಲಿನ ಭೂ ಕಂದಾಯ 24,210.91 ರಂದು ಹೊರಡಿಸಲಾದ ಆರ್‌ಡಿ 183 ಟಿಆರ್‌ಎಂ 94ನೇ ಕ್ರಮಾಂಕದ ಅಧಿಸೂಚನೆ;

26. ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ 16 ಗ್ರಾಮಗಳ 1984–85ನೇ ಸಾಲಿನ ಭೂ ಕಂದಾಯ 74,784.11ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 7.12.1994 ರಂದು ಹೊರಡಿಸಲಾದ ಆರ್‌ಡಿ 162 ಟಿಆರ್‌ಎಂ 94ನೇ ಕ್ರಮಾಂಕದ ಅಧಿಸೂಚನೆ;

27. ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನ 6ಗ್ರಾಮಗಳ 1974–75ನೇ ಸಾಲಿನ ಭೂ ಕಂದಾಯ 10,813.72 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 7.12.1994 ರಂದು ಹೊರಡಿಸಲಾದ ಆರ್‌ಡಿ 166 ಟಿಆರ್‌ಎಂ 94ನೇ ಕ್ರಮಾಂಕದ ಅಧಿಸೂಚನೆ;

1957ನೇ ಸಾಲಿನ ಕರ್ನಾಟಕ ಮುದ್ರಾಂಕ ಕಾಯ್ದೆಯ 9(2)ನೇ ಕಲಮಿನ ಮೇರೆಗೆ;

28. ಶ್ರೀ ಪಿ.ವಿ. ಇಂದಿರೇಶನ್‌ರವರು ಮೈಸೂರಿನ ಶ್ರೀ ರಾಮಕೃಷ್ಣಾಶ್ರಮಕ್ಕೆ ನಿವೇಶನವನ್ನು ದಾನವಾಗಿ ನೀಡಲು ಬರೆದುಕೊಡುವ ದಾನಪತ್ರಕ್ಕೆ ತಗಲುವ ಮುದ್ರಾಂಕ ಶುಲ್ಕವನ್ನು ವಿನಾಯಿತಿ ಮಾಡುವ ಸಂಬಂಧದಲ್ಲಿ ದಿನಾಂಕ 31.8.1994 ರಂದು ಹೊರಡಿಸಲಾದ ಕಂ.ಇ 58 ಇಎಸ್‌ಆರ್ 94ನೇ ಕ್ರಮಾಂಕದ ಆದೇಶ;

29. ರಾಜ್ಯದಲ್ಲಿ ನಿರ್ಮಿಸುವ ಚಲನಚಿತ್ರ ಮಂದಿರಗಳು, ಚಲನಚಿತ್ರ ಸಂಸ್ಕರಣ, ಮುದ್ರಣ ಮತ್ತು ವಿಕಾಸ ಲ್ಯಾಬೋರೇಟರಿಗಳು ಇತ್ಯಾದಿಗಳಿಗೆ ಖರೀದಿಸಲಾಗುವ ಜಮೀನಿನ ದಸ್ತಾವೇಜುಗಳಿಗೆ ತಗಲುವ ಮುದ್ರಾಂಕ ಶುಲ್ಕವನ್ನು ವಿನಾಯಿತಿ ಮಾಡುವ ಸಂಬಂಧದಲ್ಲಿ ದಿನಾಂಕ 28.9.1994 ರಂದು ಹೊರಡಿಸಲಾದ ಆರ್‌ಡಿ 123 ಇಎಸ್‌ಆರ್ 94ನೇ ಕ್ರಮಾಂಕದ ಆದೇಶಗಳನ್ನು ಮಂಡಿಸುತ್ತೇನೆ.

IV. ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಮಂತ್ರಿ) ಮಾನ್ಯ ಅಧ್ಯಕ್ಷರೆ,

1976ರ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮದ 45(2)ನೇ ಕಲಮಿನ ಮೇರೆಗೆ;

1990 ಹಾಗೂ 1991–92ನೇ ಸಾಲಿನ ಕರ್ನಾಟಕ ವಿಶ್ವವಿದ್ಯಾಲಯದ ವಾರ್ಷಿಕ ವರದಿಗಳನ್ನು ಮಂಡಿಸುತ್ತೇನೆ.

V. ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಮಂತ್ರಿ) ಮಾನ್ಯ ಅಧ್ಯಕ್ಷರೆ,

1993ರ ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮದ 320 ನೇ ಕಲಮಿನ ಮೇರೆಗೆ;

1. ಕರ್ನಾಟಕ ಪಂಚಾಯತ್ ರಾಜ್ (ಗ್ರಾಮಪಂಚಾಯತ್ ಅಧ್ಯಕ್ಷ ಮತ್ತು ಉಪಾಧ್ಯಕ್ಷ ವಿರುದ್ಧ ಅವಿಶ್ವಾಸ ಸೂಚನೆ ಮಂಡನೆ) ನಿಯಮ 1994ನ್ನು ರಚಿಸಿರುವ ಬಗ್ಗೆ ದಿನಾಂಕ 21.9.1994ರಂದು ಹೊರಡಿಸಲಾದ ಗ್ರಾಅಪ್ 722ಜಪಸ 94ನೇ ಕ್ರಮಾಂಕದ ಅಧಿಸೂಚನೆ;

1993ರ ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮದ 262(3)ನೇ ಕಲಮಿನ ಮೇರೆಗೆ;

2. 1990–91ನೇ ಸಾಲಿನ ಕೋಲಾರ ಜಿಲ್ಲಾ ಪರಿಷತ್ತಿನ ಪ್ರಮಾಣೀಕೃತ ವಾರ್ಷಿಕ ಲೆಕ್ಕಪತ್ರಗಳು;

3. 1991–92ನೇ ಸಾಲಿನ ಕೋಲಾರ ಜಿಲ್ಲಾ ಪಂಚಾಯತಿಯ ವಾರ್ಷಿಕ ಪ್ರಮಾಣೀಕೃತ ಲೆಕ್ಕಪತ್ರಗಳು ಹಾಗೂ ಲೆಕ್ಕಪರಿಶೋಧನಾ ವರದಿ;

4. 1992–93ನೇ ಸಾಲಿನ ಚಿತ್ರದುರ್ಗ ಜಿಲ್ಲಾ ಪರಿಷತ್ತಿನ ವಾರ್ಷಿಕ ಲೆಕ್ಕಪತ್ರಗಳು ಹಾಗೂ ಲೆಕ್ಕಪರಿಶೋಧನಾ ವರದಿ;

5. 1991–92ನೇ ಸಾಲಿನ ಮೈಸೂರು ಜಿಲ್ಲಾ ಪರಿಷತ್ತಿನ ವಾರ್ಷಿಕ ಲೆಕ್ಕಪತ್ರಗಳು ಹಾಗೂ ಲೆಕ್ಕಪರಿಶೋಧನಾ ವರದಿ;

6. 1991–92ನೇ ಹಾಗೂ 1992-93ನೇ ಸಾಲುಗಳ ದಕ್ಷಿಣ ಕನ್ನಡ ಜಿಲ್ಲಾ ಪರಿಷತ್ತಿನ ವಾರ್ಷಿಕ ಲೆಕ್ಕಪತ್ರಗಳು

7. 1992–93ನೇ ಸಾಲಿನ ಮಂಡ್ಯ ಜಿಲ್ಲಾ ಪಂಚಾಯತ್‌ನ ವಾರ್ಷಿಕ ಲೆಕ್ಕಪತ್ರಗಳು ಹಾಗೂ ಲೆಕ್ಕಪರಿಶೋಧನಾ ವರದಿ;

8. 1991–92ನೇ ಸಾಲಿನ ಶಿವಮೊಗ್ಗ ಜಿಲ್ಲಾ ಪರಿಷತ್ತಿನ ವಾರ್ಷಿಕ ಲೆಕ್ಕಪತ್ರಗಳು ಹಾಗೂ ಲೆಕ್ಕಪರಿಶೋಧನಾ ವರದಿ;

9. 1992–93ನೇ ಸಾಲಿನ ಕೊಡುಗು ಜಿಲ್ಲಾ ಪರಿಷತ್ತಿನ ವಾರ್ಷಿಕ ಲೆಕ್ಕಪತ್ರಗಳು ಹಾಗೂ ಲೆಕ್ಕಪರಿಶೋಧನಾ ವರದಿ;

10. 1991–92ನೇ ಸಾಲಿನ ಬೆಂಗಳೂರು (ಗ್ರಾಮಾಂತರ) ಜಿಲ್ಲಾ ಪಂಚಾಯತ್‌ನ ವಾರ್ಷಿಕ ಲೆಕ್ಕಪತ್ರಗಳ ಮೇಲಿನ ಲೆಕ್ಕಪರಿಶೋಧನಾ ವರದಿ;

11. 1990–91ನೇ ಸಾಲಿನ ಹಾಸನ ಜಿಲ್ಲಾ ಪರಿಷತ್ತಿನ ವಾರ್ಷಿಕ ಲೆಕ್ಕಪತ್ರಗಳು ಹಾಗೂ ಲೆಕ್ಕಪರಿಶೋಧನಾ ವರದಿ;

12. 1990–91ನೇ ಸಾಲಿನ ಚಿಕ್ಕಮಗಳೂರು ಜಿಲ್ಲಾ ಪಂಚಾಯತ್‌ನ ವಾರ್ಷಿಕ ಲೆಕ್ಕಪತ್ರಗಳು ಹಾಗೂ ಲೆಕ್ಕಪರಿಶೋಧನಾ ವರದಿ;

1993ರ ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮದ 300(5)ನೇ ಕಲಮಿನ ಮೇರೆಗೆ;

13. 1992–93ನೇ ಸಾಲಿನ ದಕ್ಷಿಣ ಕನ್ನಡ ಜಿಲ್ಲಾ ಪರಿಷತ್ತಿನ ವಾರ್ಷಿಕ ಆಡಳಿತ ವರದಿ (ಜ್ಞಾಪನಾಪತ್ರದೊಂದಿಗೆ);

14. 1992–93ನೇ ಸಾಲಿನ ಉತ್ತರ ಕನ್ನಡ ಜಿಲ್ಲಾ ಪರಿಷತ್ತಿನ ವಾರ್ಷಿಕ ಆಡಳಿತ ವರದಿ (ಜ್ಞಾಪನಾಪತ್ರದೊಂದಿಗೆ);

15. 1992–93ನೇ ಸಾಲಿನ ಬಿಜಾಪುರ ಜಿಲ್ಲಾ ಪಂಚಾಯತ್‌ನ ವಾರ್ಷಿಕ ಆಡಳಿತ ವರದಿ (ಜ್ಞಾಪನಾಪತ್ರದೊಂದಿಗೆ);

16. 1992–93ನೇ ಸಾಲಿನ ಚಿಕ್ಕಮಗಳೂರು ಜಿಲ್ಲಾ ಪಂಚಾಯತ್‌ನ ವಾರ್ಷಿಕ ಆಡಳಿತ ವರದಿ (ಜ್ಞಾಪನಾಪತ್ರದೊಂದಿಗೆ)ಗಳನ್ನು ಮಂಡಿಸುತ್ತೇನೆ.

VI. ಶ್ರೀ ಸಿದ್ದರಾಮಯ್ಯ (ಹಣಕಾಸು ಮತ್ತು ಯೋಜನಾ ಮಂತ್ರಿ) ಮಾನ್ಯ ಅಧ್ಯಕ್ಷರೆ,

1957ನೇ ಇಸವಿಯ ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ 39ನೇ ಕಲಮಿನ ಮೇರೆಗೆ;

1. ತಕ್ಷಣವೇ ಜಾರಿಗೆ ಬರುವಂತೆ ಅಂಗವಿಕಲ ಹಾಗೂ ಬುದ್ಧಿಮಾಂದ್ಯ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಉಪಯೋಗಿಸುವ ವುಡನ್ ಟೀಚಿಂಕ್ ಏಡ್ಸ್‌ನ ಮಾರಾಟದ ಮೇಲೆ ವರ್ತಕರು ಪಾವತಿ ಮಾಡಬೇಕಾದ ತೆರಿಗೆ ವಿನಾಯಿತಿ ಸಂಬಂಧದಲ್ಲಿ ದಿನಾಂಕ 24.10.1994 ರಂದು ಹೊರಡಿಸಲಾದ ಎಫ್‌ಡಿ 66 ಸಿಎಸ್‌ಎಲ್ 94ನೇ ಕ್ರಮಾಂಕದ ಅಧಿಸೂಚನೆ;

2. ತಕ್ಷಣವೇ ಜಾರಿಗೆ ಬರುವಂತೆ ವಿದ್ಯುಚ್ಛಕ್ತಿಯ ಉತ್ಪಾದನೆ ಮತ್ತು ವಿತರಣೆಯಲ್ಲಿ ಉಪಯೋಗಿಸುವುದಕ್ಕಾಗಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ನೀಡಲಾದ ಸರಕುಗಳ ಬಳಕೆಯ ಹಕ್ಕಿನ ವರ್ಗಾವಣೆಗೆ ಸಂಬಂಧಿಸಿದ ವ್ಯಾಪಾರದ ಮೊತ್ತದ ಮೇಲೆ, ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯಿಂದ ಪಡೆದ ಘೋಷಣೆಯನ್ನು ಹಾಜರುಪಡಿಸಿದಲ್ಲಿ ವರ್ತಕರು ಪಾವತಿ ಮಾಡಬೇಕಾದ ತೆರಿಗೆ ವಿನಾಯಿತಿ ಸಂಬಂಧದಲ್ಲಿ ದಿನಾಂಕ 8.11.1994 ರಂದು ಹೊರಡಿಸಲಾದ ಎಫ್‌ಡಿ 79 ಸಿಎಸ್‌ಎಲ್ 94ನೇ ಕ್ರಮಾಂಕದ ಅಧಿಸೂಚನೆ;

1951ರ ರಾಜ್ಯ ಹಣಕಾಸು ಸಂಸ್ಥೆಗಳ ಅಧಿನಿಯಮದ 38(3)ನೇ ಕಲಮಿನ ಮೇರೆಗೆ;

3. 1993-94ನೇ ಸಾಲಿನ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ 35ನೇ ವಾರ್ಷಿಕ ವರದಿಗಳನ್ನು ಮಂಡಿಸುತ್ತೇನೆ.

VII. ಶ್ರೀ ಆರ್.ವಿ. ದೇಶಪಾಂಡೆ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಮಂತ್ರಿ) ಮಾನ್ಯ ಅಧ್ಯಕ್ಷರೆ,

1950ರ ಕಂಪನಿಗಳ ಕಾಯ್ದೆಯ 619ಎ ಕಲಮಿನ ಮೇರೆಗೆ;

1. 1991-92ನೇ ಸಾಲಿನ ಕರ್ನಾಟಕ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತದ 16ನೇ ವಾರ್ಷಿಕ ವರದಿ;

2. 1992-93ನೇ ಸಾಲಿನ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತದ 18ನೇ ವಾರ್ಷಿಕ ವರದಿ;

3. 1993-94ನೇ ಸಾಲಿನ ಕರ್ನಾಟಕ ರಾಜ್ಯ ಎಲೆಕ್ಟ್ರಾನಿಕ್ಸ್ ಅಭಿವೃದ್ಧಿ ನಿಗಮ ನಿಯಮಿತದ 17ನೇ ವಾರ್ಷಿಕ ವರದಿ;

4. 1991-92ನೇ ಸಾಲಿನ ಮೈಸೂರು ಕ್ರೋಂ ಟ್ಯಾನಿಂಗ್ ಕಂಪನಿ ನಿಯಮಿತದ 52ನೇ ವಾರ್ಷಿಕ ವರದಿ;

5. 1993-94ನೇ ಸಾಲಿನ ಮೈಸೂರು ಲ್ಯಾಂಪ್ ವರ್ಕ್ಸ್ ನಿಯಮಿತದ 58ನೇ ವಾರ್ಷಿಕ ವರದಿ,

6. 1993-94ನೇ ಸಾಲಿನ ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕು ನಿಯಮಿತದ 33ನೇ ವಾರ್ಷಿಕ ವರದಿ;

7. 1993-94ನೇ ಸಾಲಿನ ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತದ 14ನೇ ವಾರ್ಷಿಕ ವರದಿ;

8. 1993-94ನೇ ಸಾಲಿನ ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಮತ್ತು ಅಭಿವೃದ್ಧಿ ನಿಗಮ ನಿಯಮಿತದ 30ನೇ ವಾರ್ಷಿಕ ವರದಿ;

9. 1993–94ನೇ ಸಾಲಿನ ಕರ್ನಾಟಕ ವಿದ್ಯುತ್ ಕಾರ್ಖಾನೆ ನಿಯಮಿತದ 18ನೇ ವಾರ್ಷಿಕ ವರದಿಗಳನ್ನು ಮಂಡಿಸುತ್ತೇನೆ.

VIII. ಶ್ರೀ ಪಿ.ಜಿ.ಆರ್. ಸಿಂಧ್ಯ (ಗೃಹ ಮಂತ್ರಿ) ಮಾನ್ಯ ಅಧ್ಯಕ್ಷರೆ,

1964ನೇ ಸಾಲಿನ ಕರ್ನಾಟಕ ಸಿನಿಮಾ (ನಿಯಂತ್ರಣ) ಅಧಿನಿಯಮದ 22ನೇ ಕಲಮಿನ ಮೇರೆಗೆ;

1. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲ್ಲೂಕಿನ ಪ್ರಕಾಶ ಚಿತ್ರಮಂದಿರವನ್ನು ಖಾಯಂ ಚಿತ್ರಮಂದಿರವನ್ನಾಗಿ ಪರಿವರ್ತಿಸುವ ಸಂಬಂಧದಲ್ಲಿ ದಿನಾಂಕ 5.12.1994 ರಂದು ಹೊರಡಿಸಲಾದ ಹೆಚ್‌ಡಿ 223 ಸಿಎನ್‌ಎ 92ನೇ ಕ್ರಮಾಂಕದ ಅಧಿಸೂಚನೆ;

2. ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನ ಕರ್ನಾಟಕ ರೀಜನಲ್ ಇಂಜನಿರಿಂಗ್ ಕಾಲೇಜ್, ಸುರತ್ಕಲ್ ಇವರು ತಮ್ಮ ಕಾಲೇಜಿನ ಆವರಣದಲ್ಲಿ 35 ಎಂಎಂ ಚಲನಚಿತ್ರವನ್ನು ಪ್ರದರ್ಶಿಸಲು ಅನುಮತಿ ನೀಡುವ ಸಂಬಂಧದಲ್ಲಿ ದಿನಾಂಕ 23.9.1994 ರಂದು ಹೊರಡಿಸಲಾದ ಹೆಚ್‌ಡಿ 168 ಸಿಎನ್‌ಎ 93ನೇ ಕ್ರಮಾಂಕದ ಆದೇಶ;

3. ನ್ಯಾಷನಲ್ ಸೆಂಟರ್ ಆಫ್ ಫಿಲಮ್ಸ್ ಫಾರ್ ಚಿಲ್ಡ್ರನ್ ಅಂಡ್ ಯಂಗ್ ಪೀಪಲ್ ಮದ್ರಾಸ್ ಇವರು ಜುಲೈ 1993 ರಿಂದ ಮಾರ್ಚ್ 1994 ರವರೆಗೆ ಕರ್ನಾಟಕ ರಾಜ್ಯದ ಕೆಲವು ಜಿಲ್ಲೆಗಳಲ್ಲಿ ಮಕ್ಕಳ ಮತ್ತು ಯುವ ಜನಾಂಗದ ಚಲನಚಿತ್ರೋತ್ಸವ ನಡೆಸುವ ಸಂಬಂಧದಲ್ಲಿ ದಿನಾಂಕ 17.8.1994 ರಂದು ಹೊರಡಿಸಲಾದ ಹೆಚ್‌ಡಿ 78 ಸಿಎನ್‌ಎ 94ನೇ ಕ್ರಮಾಂಕದ ಆದೇಶ;

4. ರಾಯಚೂರಿನ ಪೋಲೀಸ್ ಕೇಂದ್ರ ಸ್ಥಾನದ ಬಯಲು ಸಭಾಂಗಣದಲ್ಲಿ 35 ಎಂಎಂ ಚಲನಚಿತ್ರ ಪ್ರದರ್ಶಿಸಲು ಅನುಮತಿ ನೀಡುವ ಸಂಬಂಧದಲ್ಲಿ ದಿನಾಂಕ 26.10.1994 ರಂದು ಹೊರಡಿಸಲಾದ ಹೆಚ್‌ಡಿ 105 ಸಿಎನ್‌ಎ 94ನೇ ಕ್ರಮಾಂಕದ ಆದೇಶ;

5. ಸಂಚಾರಿ ಚಿತ್ರಮಂದಿರಗಳನ್ನು ತಾತ್ಕಾಲಿಕ ಚಿತ್ರಮಂದಿರಗಳನ್ನಾಗಿ ಪರಿವರ್ತಿಸುವ ಸಂಬಂಧದಲ್ಲಿ ದಿನಾಂಕ 14.7.1994 ರಂದು ಹೊರಡಿಸಲಾದ ಹೆಚ್‌ಡಿ 3 ಸಿಎನ್‌ಎ 94ನೇ ಕ್ರಮಾಂಕದ ಆದೇಶ;

6. ಬಿಇಎಲ್ ಕಲಾ ಕ್ಷೇತ್ರದಲ್ಲಿ 35 ಎಂಎಂ ಚಲನಚಿತ್ರ ಪ್ರದರ್ಶನಕ್ಕೆ ವಿನಾಯಿತಿ ನೀಡುವ ಸಂಬಂಧದಲ್ಲಿ ದಿನಾಂಕ 28.10.1994 ರಂದು ಹೊರಡಿಸಲಾದ ಹೆಚ್‌ಡಿ 151 ಸಿಎನ್‌ಎ 94ನೇ ಕ್ರಮಾಂಕದ ಆದೇಶಗಳನ್ನು ಮಂಡಿಸುತ್ತೇನೆ.

IX ಶ್ರೀ ಪಿ.ಜಿ.ಆರ್ ಸಿಂಧ್ಯಾ (ಗೃಹ ಮಂತ್ರಿ) ಮಾನ್ಯ ಅಧ್ಯಕ್ಷರೆ, ಮಾನ್ಯ ನಗರಾಭಿವೃದ್ಧಿ ಮಂತ್ರಿಗಳ ಪರವಾಗಿ

1987ರ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರದ ಅಧಿನಿಯಮದ 48(5)ನೇ ಕಲುಮಿನ ಮೇರೆಗೆ;

1. 1992–93ನೇ ಸಾಲಿನ ಕೆಜಿಎಫ್ ನಗರಾಭಿವೃದ್ಧಿ ಪ್ರಾಧಿಕಾರದ ಲೆಕ್ಕ ಪರಿಶೋಧನಾ ವರದಿ;

2. 1987–88ನೇ ಹಾಗೂ 1988–89ನೇ ಸಾಲುಗಳ ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ ಲೆಕ್ಕ ಪರಿಶೋಧನಾ ವರದಿ;

3. 1992–93ನೇ ಸಾಲಿನ ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದ ಲೆಕ್ಕ ಪರಿಶೋಧನಾ ವರದಿ;

4. 1992–93ನೇ ಸಾಲಿನ ಹಾಸನ ನಗರಾಭಿವೃದ್ಧಿ ಪ್ರಾಧಿಕಾರದ ಲೆಕ್ಕ ತಪಾಸಣಾ ವರದಿ;

5. 1993–94ನೇ ಸಾಲಿನ ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಲೆಕ್ಕ ತಪಾಸಣ ವರದಿ;

6. 1993–94ನೇ ಸಾಲಿನ ವಿಜಾಪುರ ನಗರಾಭಿವೃದ್ಧಿ ಪ್ರಾಧಿಕಾರದ ಲೆಕ್ಕ ತನಿಖಾ ವರದಿ;

7. 1986–87, 1987–88ಹಾಗೂ 1992–93ನೇ ಸಾಲಿನ ಬೀದರ್ ನಗರಾಭಿವೃದ್ಧಿ ಪ್ರಾಧಿಕಾರದ ಲೆಕ್ಕ ಪರಿಶೋಧನಾ ವರದಿ;

8. 1992–93ನೇ ಸಾಲಿನ ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದ ಲೆಕ್ಕ ಪರಿಶೋಧನಾ ವರದಿ;

9. 1992–93ನೇ ಸಾಲಿನ ದಾವಣಗೆರೆ ನಗರಾಭಿವೃದ್ಧಿ ಪ್ರಾಧಿಕಾರದ ಲೆಕ್ಕ ಪರಿಶೋಧನಾ ವರದಿ;

10. 1988–89, 1989–90 ಹಾಗೂ 1990–91 1991–92, 1992–93 ಹಾಗೂ 1993–94ನೇ ಸಾಲುಗಳ ಚಿತ್ರದುರ್ಗ ನಗರಾಭಿವೃದ್ಧಿ ಪ್ರಾಧಿಕಾರದ ಲೆಕ್ಕ ಪರಿಶೋಧನಾ ವರದಿ;

1987ರ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರದ ಅಧಿನಿಯಮದ 49ನೇ ಕಲಮಿನ ಮೇರೆಗೆ;

11. 1986 ರಿಂದ 1994 ರವರೆಗಿನ ವಿಜಾಪುರ ನಗರಾಭಿವೃದ್ಧಿ ಪ್ರಾಧಿಕಾರದ ವಾರ್ಷಿಕ ವರದಿಗಳು;

12. 1988–89 ರಿಂದ 1993–94 ರವರೆಗಿನ ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ವಾರ್ಷಿಕ ವರದಿಗಳು;

13. 1990–91 ರಿಂದ 1993–94 ರವರೆಗಿನ ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದ ವಾರ್ಷಿಕ ವರದಿಗಳು;

14. 1988–89 ರಿಂದ 1993–94 ರವರೆಗಿನ ಬೀದರ್ ನಗರಾಭಿವೃದ್ಧಿ ಪ್ರಾಧಿಕಾರದ ವಾರ್ಷಿಕ ವರದಿಗಳು;

15. 1988–89 ರಿಂದ 1992–93 ರವರೆಗಿನ ದಾವಣಗೆರೆ ನಗರಾಭಿವೃದ್ಧಿ ಪ್ರಾಧಿಕಾರದ ವಾರ್ಷಿಕ ವರದಿಗಳು;

16. 1988–89 ರಿಂದ 1993–94 ರವರೆಗಿನ ಹಾಸನ ನಗರಾಭಿವೃದ್ಧಿ ಪ್ರಾಧಿಕಾರದ ವಾರ್ಷಿಕ ವರದಿಗಳು;

1962ರ ಕರ್ನಾಟಕ ಗೃಹ ಮಂಡಳಿ ಕಾಯ್ದೆಯ 69ನೇ ಕಲಮಿನ ಮೇರೆಗೆ;

17. 1990–91, 1991–92, 1992–93 ಹಾಗೂ 1993–94ನೇ ಸಾಲುಗಳ ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿಯ ವಾರ್ಷಿಕ ವರದಿಗಳು;

1973ರ ಕರ್ನಾಟಕ ನಗರ ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿಯ ಅಧಿನಿಯಮದ 42(2) (ಎ) ಕಲಮಿನ ಮೇರೆಗೆ

18. 1991–92ನೇ ಸಾಲಿನ ಕರ್ನಾಟಕ ನಗರ ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿಯ ವಾರ್ಷಿಕ ಲೆಕ್ಕಗಳು ಹಾಗೂ ಲೆಕ್ಕಪರಿಶೋಧನಾ ವರದಿಗಳನ್ನು ಮಂಡಿಸುತ್ತೇನೆ.

ಶ್ರೀ ಸಿ. ಭೈರೇಗೌಡ (ಕೃಷಿ ಮಂತ್ರಿ) ಮಾನ್ಯ ಅಧ್ಯಕ್ಷರೆ,

1963ರ ಕೃಷಿ ವಿಶ್ವವಿದ್ಯಾನಿಲಯಗಳ ಕಾಯ್ದೆಯ 38(3)ನೇ ಕಲಮಿನ ಮೇರೆಗೆ;

1. 1986–87, 1987–88 ಹಾಗೂ 1988–89ನೇ ಸಾಲುಗಳ ಧಾರವಾಡ ಕೃಷಿ ವಿಶ್ವವಿದ್ಯಾನಿಲಯದ ಲೆಕ್ಕ ತನಿಖಾ ವರದಿಗೆ ಅನುಸರಣಾ ವರದಿಗಳು;

1956ರ ಕಂಪನಿಗಳ ಕಾಯ್ದೆಯ 619ಎ ಕಲಮಿನ ಮೇರೆಗೆ;

2. 1989–90 ಹಾಗೂ 1990–91ನೇ ಸಾಲುಗಳ ಕರ್ನಾಟಕ ಆಗ್ರೋ ಪ್ರೋಟೀನ್ಸ್ ನಿಯಮಿತದ ವಾರ್ಷಿಕ ವರದಿಗಳು;

3. 1990–91 ಹಾಗೂ 1991–92ನೇ ಸಾಲುಗಳ ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಲಿಮಿಟೆಡ್‌ನ 24ನೇ ಹಾಗೂ 25ನೇ ವಾರ್ಷಿಕ ವರದಿಗಳು;

4. 1991–92ನೇ ಸಾಲಿನ ಕರ್ನಾಟಕ ಸ್ಟೇಟ್ ಆಗ್ರೋ ಕಾರ್ನ್ ಪ್ರಾಡಕ್ಟ್ಸ ಲಿಮಿಟೆಡ್‌ನ 19ನೇ ವಾರ್ಷಿಕ ವರದಿಗಳನ್ನು ಮಂಡಿಸುತ್ತೇನೆ.

XI. ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿ) ಮಾನ್ಯ ಅಧ್ಯಕ್ಷರೆ,

1956ರ ಕಂಪನಿಗಳ ಕಾಯ್ದೆಯ 619ಎ ಕಲಮಿನ ಮೇರೆಗೆ;

1. 1992–93ನೇ ಸಾಲಿನ ಕರ್ನಾಟಕ ಚಲನಚಿತ್ರ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತದ 25ನೇ ವಾರ್ಷಿಕ ವರದಿ ಮತ್ತು ಲೆಕ್ಕಪತ್ರಗಳು;

2. 31ನೇ ಮಾರ್ಚ್ 1993ಕ್ಕೆ ಅಂತ್ಯಗೊಂಡ ಶ್ರೀ ಕಂಠೀರವ ಸ್ಟುಡಿಯೋಸ್ ನಿಯಮಿತದ 27ನೇ ವಾರ್ಷಿಕ ವರದಿಗಳನ್ನು ಮಂಡಿಸುತ್ತೇನೆ.

XII. ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಮಂತ್ರಿ) ಮಾನ್ಯ ಅಧ್ಯಕ್ಷರೆ,

1956ರ ಕಂಪನಿಗಳ ಕಾಯ್ದೆಯ 619ಎ ಕಲಮಿನ ಮೇರೆಗೆ;

1993–94ನೇ ಸಾಲಿನ ಕೊಂಕಣ ರೈಲ್ವೇ ನಿಗಮ ನಿಯಮತದ 4ನೇ ವಾರ್ಷಿಕ ವರದಿಯನ್ನು ಮಂಡಿಸುತ್ತೇನೆ.

XIII. ಶ್ರೀ ತಿಪ್ಪೇಸ್ವಾಮಿ (ಅಬಕಾರಿ ಮಂತ್ರಿ) ಮಾನ್ಯ ಅಧ್ಯಕ್ಷರೆ,

1965ನೇ ಇಸವಿಯ ಕರ್ನಾಟಕ ಅಬಕಾರಿ ಅಧಿನಿಯಮ 71(4)ನೇ ಕಲಮಿನ ಮೇರೆಗೆ;

1. 1967ನೇ ಇಸವಿಯ ಕರ್ನಾಟಕ ಅಬಕಾರಿ (ಸ್ವಾಧೀನತೆ, ಸಾಗಾಣಿಕೆ, ಮಾದಕ ದ್ರವ್ಯಗಳ ಆಮದು) ನಿಯಮಗಳ ತಿದ್ದುಪಡಿಗೆ ಸಂಬಂಧಿಸಿದಂತೆ ದಿನಾಂಕ 3.5.1994 ರಂದು ಹೊರಡಿಸಲಾದ ಎಫ್‌ಡಿ 28 ಪಿಇಎಸ್ 90ನೇ ಕ್ರಮಾಂಕದ ಅಧಿಸೂಚನೆ;

2. 1967ನೇ ಇಸವಿಯ ಕರ್ನಾಟಕ ಅಬಕಾರಿ ಪರವಾನಗಿ (ಸಾಮಾನ್ಯಷರತ್ತುಗಳು) ನಿಯಮಗಳ ತಿದ್ದುಪಡಿಗೆ ಸಂಬಂಧಿಸಿದಂತೆ ದಿನಾಂಕ 19.7.1994 ರಂದು ಹೊರಡಿಸಲಾದ ಎಫ್‌ಡಿ 9 ಪಿಇಎಸ್ 94ನೇ ಕ್ರಮಾಂಕದ ಅಧಿಸೂಚನೆ:

2ಅ. ದಿನಾಂಕ 19.7.1994 ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ ಎಫ್‌ಡಿ 9 ಪಿಇಎಸ್ 94ರ ತಿದ್ದುಪಡಿಗೆ ಸಂಬಂಧಿಸಿದಂತೆ ದಿನಾಂಕ 12.8.1994 ರಂದು ಹೊರಡಿಸಲಾದ ಎಫ್‌ಡಿ 9 ಪಿಇಎಸ್ 94ನೇ ಕ್ರಮಾಂಕದ ತಿದ್ದೋಲೆ;

3. 1967ನೇ ಇಸವಿಯ ಕರ್ನಾಟಕ ಅಬಿಕಾರಿ ಪರವಾನಗಿ (ಸಾಮಾನ್ಯ ಷರತ್ತುಗಳ) ನಿಯಮಗಳಿಗೆ ತಿದ್ದುಪಡಿ ಸಂಬಂಧದಲ್ಲಿ ದಿನಾಂಕ 22.9.1994 ರಂದು ಹೊರಡಿಸಲಾದ ಎಫಅಡಿ ಪಿಇಎಸ್ 94ನೇ ಕ್ರಮಾಂಕದ ಅಧಿಸೂಚನೆ;

3ಅ. ದಿನಾಂಕ 22.9.1994 ರಂದು ಹೊರಡಿಸಲಾದ ಎಫ್‌ಡಿ ಪಿಇಎಸ್ 94ರ ಅಧಿಸೂಚನೆಗೆ

ತಿದ್ದುಪಡಿ ಸಂಬಂಧದಲ್ಲಿ ದಿನಾಂಕ 28.11.1994 ರಂದು ಹೊರಡಿಸಲಾದ ಎಫಅಡಿ 10 ಪಿಇಎಸ್ 94ನೇ ಕ್ರಮಾಂಕ ಅಡೆಂಡಮ್‌ಗಳನ್ನು ಮಂಡಿಸುತ್ತೇನೆ.

XIV. ಶ್ರೀ ಸಿದ್ದರಾಮಯ್ಯ (ಹಣಕಾಸು ಮತ್ತು ಯೋಜನಾ ಮಂತ್ರಿ) ಮಾನ್ಯ ಅಧ್ಯಕ್ಷರೆ, ಮಾನ್ಯ ಸಾರಿಗೆ ಮಂತ್ರಿಗಳ ಪರವಾಗಿ,

1957ನೇ ಇಸವಿಯ ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಅಧಿನಿಯಮದ 16(2)ನೇ ಕಲಮಿನ ಮೇರೆಗೆ;

1. ಸೇನಾ ಸೇವಾ ಕೋರ್ ಕೇಂದ್ರ, ಎ.ಎಸ್.ಸಿ. ಸೆಂಟರ್ (ದಕ್ಷಿಣ) ಬೆಂಗಳೂರು, ಈ ಸಂಸ್ಥೆಯ ಹೊಂದಿರುವ ವಾಹನ ಸಂಖ್ಯೆ ಸಿ.ಎ.ಜೆ. 2368ಕ್ಕೆ ತೆರಿಗೆ ವಿನಾಯಿತಿ ನೀಡುವ ಸಂಬಂಧದಲ್ಲಿ ದಿನಾಂಕ 7.10.1994 ರಂದು ಹೊರಡಿಸಲಾದ ಹೆಚ್‌ಟಿಡಿ 25 ಟಿಎಂಟಿ 92ನೇ ಕ್ರಮಾಂಕದ ಅಧಿಸೂಚನೆ;

2. ಸುಮಂಗಲಿ ಸೇವಾ ಆಶ್ರಮ, ಬೆಂಗಳೂರು ಈ ಸಂಸ್ಥೆಯು ಹೊಂದಿರುವ ವಾಹನ ಸಂಖ್ಯೆ ಕೆಎ 04:ಎಂ–4770ಕ್ಕೆ ತೆರಿಗೆ ವಿನಾಯಿತಿ ನೀಡುವ ಸಂಬಂಧದಲ್ಲಿ ದಿನಾಂಕ 17.10.1994 ರಂದು ಹೊರಡಿಸಲಾದ ಹೆಚ್‌ಟಿಡಿ 84 ಟಿಎಂಟಿ 93ನೇ ಕ್ರಮಾಂಕದ ಅಧಿಸೂಚನೆ;

3. ಸಂತಪಾಲಕ ಅನಾಥಾಲಯ, ನಾರಾವಿ, ಬೆಳ್ತಂಗಡಿ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ; ಈ ಸಂಸ್ಥೆಯು ಹೊಂದಿರುವ ವಾಹನ ಸಂಖ್ಯೆ ಕೆಎ 19:ಎಂ:770ಕ್ಕೆ ತೆರಿಗೆ ವಿನಾಯಿತಿ ನೀಡುವ ಸಂಬಂಧದಲ್ಲಿ ದಿನಾಂಕ 19.9.1994ರಂದು ಹೊರಡಿಸಲಾದ ಎಫ್‌ಟಿಡಿ 115ಟಿಎಂಟಿ 93ನೇ ಕ್ರಮಾಂಕದ ಅಧಿಸೂಚನೆ;

4. ಮದ್ರಾಸ್ ಇಂಜಿನಿಯಂರಿಂಗ್ ಗ್ರೂಪ್ ಮತ್ತು ಸೆಂಟರ್, ಬೆಂಗಳೂರು, ಈ ಸಂಸ್ಥೆಯು ಹೊಂದಿರುವ ವಾಹನ ಸಂಖ್ಯೆ ಕೆಎ 03:ಎಂ:4435ಕ್ಕೆ ತೆರಿಗೆ ವಿನಾಯಿತಿ ನೀಡುವ ಸಂಬಂಧದಲ್ಲಿ ದಿನಾಂಕ 14.9.1994ರಂದು ಹೊರಡಿಸಲಾದ ಎಫ್‌ಟಿಡಿ 423ಟಿಎಂಟಿ 92ನೇ ಕ್ರಮಾಂಕದ ಅಧಿಸೂಚನೆ;

5. ಶ್ರೀ ರಮಣ ಮಹರ್ಷಿ ಅಕಾಡಮಿ, ಬೆಂಗಳೂರು, ಈ ಸಂಸ್ಥೆಯ ಹೊಂದಿರುವ ವಾಹನ ಸಂಖ್ಯೆ ಕೆಎ 05:3360ಕ್ಕೆ ತೆರಿಗೆ ವಿನಾಯಿತಿ ನೀಡುವ ಸಂಬಂಧದಲ್ಲಿ ದಿನಾಂಕ 25.7.1994 ರಂದು ಹೊರಡಿಸಲಾದ ಎಫ್‌ಟಿಡಿ 123 ಟಿಎಂಟಿ 93ನೇ ಕ್ರಮಾಂಕದ ಅಧಿಸೂಚನೆಗಳನ್ನು ಮಂಡಿಸುತ್ತೇನೆ.

XV. ಶ್ರೀ ಎನ್.ಎಂ. ನಬಿ (ಸಣ್ಣ ಕೈಗಾರಿಕೆಗಳ ಮಂತ್ರಿ) ಮಾನ್ಯ ಅಧ್ಯಕ್ಷರೆ,

1956ರ ಕಂಪನಿಗಳ ಕಾಯ್ದೆಯ 619ಎ ಕಲಮಿನ ಮೇರೆಗೆ;

1993–94ನೇ ಸಾಲಿನ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತದ 34ನೇ ವಾರ್ಷಿಕ ವರದಿಯನ್ನು ಮಂಡಿಸುತ್ತೇನೆ.

XVI. ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಮಂತ್ರಿ) ಮಾನ್ಯ ಅಧ್ಯಕ್ಷರೆ,

1962ರ ಉಗ್ರಾಣ ನಿಗಮದ ಕಾಯ್ದೆಯ 31(11)ನೇ ಕಲಮಿನ ಮೇರೆಗೆ;

1991–92ನೇ ಸಾಲಿನ ಕರ್ನಾಟಕ ರಾಜ್ಯ ಉಗ್ರಾಣ ನಿಗಮ ನಿಯಮಿತದ 34ನೇ ವಾರ್ಷಿಕ ವರದಿ ಮತ್ತು ಪರಿಶೋಧಿತ ಲೆಕ್ಕಪತ್ರ (ವಿಳಂಬಕ್ಕೆ ಕಾರಣಗಳೊಂದಿಗೆವನ್ನು ಮಂಡಿಸುತ್ತೇನೆ.

XVII. ಶ್ರೀ ಎಸ್. ನಂಜಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿ) ಮಾನ್ಯ ಅಧ್ಯಕ್ಷರೆ, 1956ರ ಕಂಪನಿಗಳ ಕಾಯ್ದೆಯ 619ರ ಕಲಮಿನ ಮೇರೆಗೆ;

1987–88ನೇ ಸಾಲಿನ ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ನಿಯಮಿತದ 15ನೇ ವಾರ್ಷಿಕ ವರದಿಯನ್ನು ಮಂಡಿಸುತ್ತೇನೆ.

XVIII. ಶ್ರೀ ಬಿ.ಎನ್. ಬಚ್ಚೇಗೌಡ (ಪಶು ಸಂಗೋಪನೆ ರಾಜ್ಯ ಮಂತ್ರಿ) ಮಾನ್ಯ ಅಧ್ಯಕ್ಷರೆ, **1956ರ ಕಂಪನಿಗಳ ಕಾಯ್ದೆಯ 619ಎ ಕಲಮಿನ ಮೇರೆಗೆ;**

ಕರ್ನಾಟಕ ಮಾಂಸ ಮತ್ತು ಕೋಳಿ ಮಾರಾಟ ನಿಗಮ ನಿಯಮಿತದ 19ನೇ ವಾರ್ಷಿಕ ವರದಿ ಮತ್ತು 31.3.1993ರ ಲೆಕ್ಕ ಪತ್ರಗಳನ್ನು ಮಂಡಿಸುತ್ತೇನೆ.

XIX. ಶ್ರೀ ಎಂ.ಸಿ. ನಾಣಯ್ಯ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) ಮಾನ್ಯ ಅಧ್ಯಕ್ಷರೆ, ವಸತಿ ರಾಜ್ಯ ಮಂತ್ರಿಗಳ ಪರವಾಗಿ

1962ರ ಕರ್ನಾಟಕ ಗೃಹ ಮಂಡಳಿ ಅಧಿನಿಯಮದ 55(3)ನೇ ಕಲಮಿನ ಮೇರೆಗೆ;

1987–88ನೇ ಸಾಲಿನ ಕರ್ನಾಟಕ ಗೃಹ ಮಂಡಳಿಯ ವಾರ್ಷಿಕ ಲೆಕ್ಕಪತ್ರ ತಪಾಸಣಾ ವರದಿಯನ್ನು ಮಂಡಿಸುತ್ತೇನೆ:

XX. ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು) ಮಾನ್ಯ ಅಧ್ಯಕ್ಷರೆ, ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಮಂತ್ರಿಯವರ ಪರವಾಗಿ

1956ರ ಕಂಪನಿಗಳ ಕಾಯ್ದೆಯ 619ಎ ಕಲಮಿನ ಮೇರೆಗೆ;

1992–93ನೇ ಸಾಲಿನ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ ನಿಯಮಿತದ 6ನೇ ವಾರ್ಷಿಕ ವರದಿ ಮತ್ತು ಲೆಕ್ಕ ಪತ್ರಗಳನ್ನು (ವಿಳಂಬಕ್ಕೆ ಕಾರಣಗಳೊಂದಿಗೆ) ಮಂಡಿಸುತ್ತೇನೆ.

ಕಾರ್ಯದರ್ಶಿಯವರ ವರದಿ

ಕಾರ್ಯದರ್ಶಿ:– ಮಾನ್ಯ ಅಧ್ಯಕ್ಷರೇ, 9ನೇ ವಿಧಾನಸಭೆಯ ಈ ಕೆಳಕಂಡ ಸಮಿತಿಗಳ ವರದಿಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

1. ಸಾರ್ವಜನಿಕ ಉದ್ದಿಮೆಗಳ ಸಮಿತಿಯ 62, 63, 64 ಹಾಗೂ 65ನೇ ವರದಿಗಳು.

2. 1994–95ನೇ ಸಾಲಿನ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಮೇಲಿನ ವಿಷಯ ಸಮಿತಿಯ 2ನೇ ವರದಿ.

ಕೃಷ್ಣ ಮತ್ತು ಕಾವೇರಿ ಯೋಜನೆಗಳ ಬಗ್ಗೆ ಸರ್ಕಾರದ ನಿಲುವು

† ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಅಧ್ಯಕ್ಷರೇ, ನಾನು ತಮ್ಮ ಕೊಠಡಿಗೆ ಬಂದು ತಮ್ಮ ಅಪ್ಪಣೆಯನ್ನು ಪಡೆದು ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರಬೇಕೆಂದು ಹೇಳಿದ್ದೇನೆ.

ಅಧ್ಯಕ್ಷರು: ತಾವುಗಳು ತಮ್ಮ ನಿಲುವಳಿ ಸೂಚನೆಯ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಹೊರಟಿದ್ದೀರಿ. ಶೂನ್ಯವೇಳೆಯಲ್ಲಿ ಅವರು ಎರಡು ವಿಷಯಗಳನ್ನು ಹೇಳಿದ್ದಾರೆ. ಅದು ಆದ ನಂತರ ತಮ್ಮ ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳಲು ಅವಕಾಶ ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೇ, ಹೊಸ ಸರಕಾರವು ಅಧಿಕಾರಕ್ಕೆ ಬಂದಮೇಲೆ